



ಹಾಕಿದಾಗ ಅವುಗಳಿಗೆ ಸೋಂಕು ತಗುಲಿತ್ತು. ಶೋಧಕಗಳ ಮೂಲಕ ಹಾಕಿ ತೆಗೆದರೂ ಅತ್ಯಂತ ಸೂಕ್ಷ್ಮ ರೋಗಾಣುಗಳು ಇವೆ ಎಂದು ಅವರು ನಿರೂಪಿಸಿದರು. 1898ರಲ್ಲಿ ಡಚ್ ವಿಜ್ಞಾನಿ ಮಾರ್ಟಿನಸ್ ಬೈಜರಿಂಕ್, ಶೋಧಕಗಳನ್ನೂ ಉಪಯೋಗಿಸಿಯೂ ಹರಡುವ ಇದನ್ನು 'ಸಾಂಕ್ರಾಮಿಕ ಜೀವಂತ ದ್ರವ' ಎಂದು ಬಣ್ಣಿಸಿ ವೈರಸ್ (ಲ್ಯಾಟಿನ್ ಭಾಷೆಯಲ್ಲಿ ಅಂಟಾದ ದ್ರವ ಅಥವಾ ವಿಷ) ಎಂಬ ಶಬ್ದದಿಂದ ಕರೆದರು.

## ವೈರಸ್ ವಿರುದ್ಧ ಹೋರಾಟ

ಸಾಮಾನ್ಯವಾಗಿ ದೇಹದ ರಕ್ಷಣಾ ವ್ಯವಸ್ಥೆ, ವೈರಸ್ ದೇಹವನ್ನು ಪ್ರವೇಶಿಸುತ್ತಿದ್ದಂತೆ ಪ್ರತಿಕ್ರಿಯಿಸಲು ಸಿದ್ಧವಾಗುತ್ತದೆ. ಅದರ ದಾಳಿ ಎದುರಿಸಲು ಜೀವಕೋಶಗಳನ್ನು ಸಜ್ಜುಗೊಳಿಸುತ್ತದೆ. ವೈರಸ್‌ಗೆ ಅಂಟಿಕೊಳ್ಳುವ ವಿಶೇಷ ಆಂಟಿಬಾಡಿಗಳನ್ನು ಉತ್ಪಾದಿಸಿ ಅದರ ಸಾಮರ್ಥ್ಯ ಕುಗ್ಗಿಸುತ್ತದೆ. ವೈರಸ್ ವಿರುದ್ಧದ ಯುದ್ಧದಲ್ಲಿ ಶತ್ರುವನ್ನು ನಾಶಪಡಿಸಲು ಟಿ ಜೀವಕೋಶಗಳೆಂಬ ಯೋಧರು ಕ್ರಿಯಾಶೀಲರಾಗುತ್ತಾರೆ! ಆದರೆ ಎಚ್‌ಐವಿ ಮತ್ತು ನ್ಯೂರೋಟ್ರೋಫಿಕ್ ವೈರಸ್‌ಗಳು ದೇಹದ ರಕ್ಷಣಾ ವ್ಯವಸ್ಥೆಯನ್ನು ತಪ್ಪಿಸಿ ಆಕ್ರಮಣ ಮಾಡುತ್ತವೆ. ಪೋಲಿಯೊ, ರೇಬಿಸ್, ದಡಾರಕ್ಕೆ ಕಾರಣವಾದ ವೈರಸ್‌ಗಳು ನರಕೋಶಗಳನ್ನು ಗುರಿಯಾಗಿಸುತ್ತದೆ. ಇವು ಕೇಂದ್ರ ನರ ಮಂಡಲದ ರಚನೆಯ ಮೇಲೆ ಪರಿಣಾಮ ಬೀರುವುದರಿಂದ ತೀವ್ರ ಪರಿಣಾಮ ಬೀರುವ ಸಾಧ್ಯತೆ ಹೆಚ್ಚು.

## ಆಂಟಿಬಯಾಟಿಕ್ ಯಾಕೆ ಮದ್ದಲ್ಲ?

ಆಂಟಿಬಯಾಟಿಕ್‌ಗಳನ್ನು ಕೊಟ್ಟು ವೈರಸ್‌ಗಳನ್ನು ನಾಶಪಡಿಸಬಾರದೇಕೆ ಎಂಬುದು ಅತಿ ಸಾಮಾನ್ಯವಾದ ಪ್ರಶ್ನೆ. ಆಂಟಿಬಯಾಟಿಕ್‌ಗಳು ಬ್ಯಾಕ್ಟೀರಿಯಾಗಳ ಮೇಲೆ ಪರಿಣಾಮ ಬೀರುತ್ತವೆ, ವೈರಸ್‌ಗಳ ಮೇಲಲ್ಲ. ವೈರಸ್‌ಗಳ ರಚನೆ ಮತ್ತು ಬದುಕುವ ವಿಧಾನ ವಿಭಿನ್ನವಾಗಿದೆ. ವೈರಸ್‌ಗಳಿಗೆ ಆಂಟಿಬಯಾಟಿಕ್ ಕೆಲಸ ಮಾಡಲು ಜೀವಕೋಶದ ಗೋಡೆಯೇ ಇಲ್ಲ. ಬದಲಿಗೆ ಪ್ರೊಟೀನಿನ ರಕ್ಷಣಾ ಕವಚವಿದೆ. ಬ್ಯಾಕ್ಟೀರಿಯಾಗಳು ಜೀವಕೋಶಗಳನ್ನು ಹೊರಗಿನಿಂದ ದಾಳಿ ಮಾಡುತ್ತವೆ. ಆದರೆ ವೈರಸ್ ಹಾಗಲ್ಲ. ಜೀವಕೋಶದ ಒಳಗೆ ಸೇರಿ, ಅಲ್ಲೇ ವಾಸಿಸಿ, ತನ್ನ ಮರುಸೃಷ್ಟಿ ಮಾಡುತ್ತದೆ. ಹೀಗಾಗಿ ಆಂಟಿಬಯಾಟಿಕ್‌ಗಳನ್ನು ಉಪಯೋಗಿಸಲು ಸಾಧ್ಯವಿಲ್ಲ.

## ಚಿಕಿತ್ಸೆ ಮತ್ತು ಲಸಿಕೆ

ವೈರಸ್ ಸೋಂಕು ಉಂಟಾದಾಗ ದೇಹ ತನ್ನದೇ ಆದ ಸ್ವಸಾಮರ್ಥ್ಯದಿಂದ ಅಂದರೆ ರೋಗಪ್ರತಿರೋಧಕ ಶಕ್ತಿಯಿಂದ ವೈರಸ್ ವಿರುದ್ಧ ಹೋರಾಡುವ ತನಕ ಕಾಯುವುದು ಸೂಕ್ತ ಮತ್ತು ಅನಿವಾರ್ಯ. ಆದರೆ ಜ್ವರ, ಮೈಕೈ ನೋವು, ಸೀನು, ಕೆಮ್ಮು ಹೀಗೆ ಸೋಂಕಿನ ಲಕ್ಷಣಗಳನ್ನು ತಗ್ಗಿಸಲು ಔಷಧಿಯನ್ನು ನೀಡಲಾಗುತ್ತದೆ. ಆಂಟಿವೈರಲ್ ಔಷಧಿಗಳು ಇದ್ದರೂ ಅವು ವೈರಸ್ ನಾಶ ಮಾಡುವುದಿಲ್ಲ; ರೋಗ ಉಲ್ಬಣವಾಗುವ ಪ್ರಕ್ರಿಯೆಯನ್ನು ನಿಧಾನ ಮಾಡುವಲ್ಲಿ ಸಹಕಾರಿ. ವೈರಸ್‌ಗಳನ್ನು ತಡೆಯಲು ಲಸಿಕೆಗಳು ಅತ್ಯಂತ ಪರಿಣಾಮಕಾರಿ ಮತ್ತು ಕಡಿಮೆ ವೆಚ್ಚದ ಮಾರ್ಗ. ಪೋಲಿಯೊ, ರುಬೆಲ್ಲಾ, ದಡಾರ, ಮಂಗನ ಬಾವು ಮುಂತಾದವುಗಳಿಗೆ ಲಸಿಕೆ ನೀಡಲಾಗುತ್ತಿದ್ದು ಸೋಂಕಿನ ಪ್ರಮಾಣ ಬಹಳಷ್ಟು ತಗ್ಗಿದೆ.

## ತಡೆಗಟ್ಟುವಿಕೆ

ವ್ಯಕ್ತಿಗಳ ನಡುವೆ ನಿಕಟ ಸಂಪರ್ಕದಿಂದ ವೈರಸ್‌ಗಳು ಹರಡುವುದರಿಂದ ಸೋಂಕಿತ ವ್ಯಕ್ತಿಗಳಿಂದ ದೂರವಿರುವುದು ಉತ್ತಮ. ಇದೇ ಕಾರಣಕ್ಕಾಗಿ ಮತ್ತೊಬ್ಬರಿಗೆ ಹರಡದಂತೆ ಅವರನ್ನು ಪ್ರತ್ಯೇಕವಾಗಿ ಇಡಲಾಗುತ್ತದೆ.

ವೈರಸ್‌ಗಳು ದೇಹವನ್ನು ಪ್ರವೇಶಿಸಲು ಕಣ್ಣು, ಮೂಗು ಮತ್ತು ಬಾಯಿ ಮಾರ್ಗಗಳು. ಹಾಗಾಗಿ ಇವುಗಳನ್ನು ಆದಷ್ಟೂ ಮುಟ್ಟದಂತೆ ಎಚ್ಚರಿಕೆ ವಹಿಸಬೇಕು.

ವೈಯಕ್ತಿಕ ಸ್ವಚ್ಛತಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಅನುಸರಿಸಬೇಕು. ಸುತ್ತಲಿನ ಪರಿಸರ ಸ್ವಚ್ಛವಾಗಿಡುವುದು, ಕೆಮ್ಮು ಸೀನುವಾಗ ಕರವಸ್ತ್ರ ಬಳಕೆ, ಕೈಯಿಂದ ಮುಟ್ಟುವ ಸ್ಥಳಗಳ ಶುಚಿತ್ವ, ಸ್ವಚ್ಛ ಶೌಚಾಲಯ ಇವೆಲ್ಲವೂ ವೈರಸ್ ಹರಡುವಿಕೆಯನ್ನು ತಡೆಗಟ್ಟುವಲ್ಲಿ ಪರಿಣಾಮಕಾರಿ.

ನೀರು ಆಹಾರವನ್ನು ಸೇವಿಸುವಾಗ ಎಚ್ಚರವಿರಲಿ. ಆದಷ್ಟೂ ಕುದಿಸಿದ ನೀರು, ಬೇಯಿಸಿದ ಆಹಾರ ಸೇವನೆ ಒಳ್ಳೆಯದು.

## ಜೀವ ನಿರ್ಜೀವ ಜಗತ್ತಿನ ನಡುವೆ

ವೈರಸ್‌ಗಳಿಗೆ ಜೀವಕೋಶವಿಲ್ಲ. ಆಹಾರವನ್ನು ಶಕ್ತಿಯಾಗಿ ಪರಿವರ್ತಿಸುವ ಶಕ್ತಿಯಿಲ್ಲ. ಆತಿಥೇಯ ಜೀವಕೋಶ ಇಲ್ಲದಿದ್ದರೆ ಅವು ಹಾನಿ ಮಾಡದ ರಾಸಾಯನಿಕಗಳ ಚಿಕ್ಕ ಪೊಟ್ಟಣಗಳು ಅಂದರೆ ನಿರ್ಜೀವ ವಸ್ತು. ಆದರೆ ವೈರಸ್‌ಗಳು ವಂಶವಾಹಿನಿ ಹೊಂದಿವೆ ಮತ್ತು ಸಂತಾನೋತ್ಪತ್ತಿ ಮಾಡುತ್ತವೆ. ಹೀಗಾಗಿ ಜೀವ ಹೊಂದಿವೆ. ಅತ್ತ ಜೀವ ಇರುವ, ಇತ್ತ ಜೀವ ಇಲ್ಲದ ಈ ವೈರಸ್ ಅವೆರಡರ ನಡುವಿನ ಕೊಂಡಿ ಎನ್ನುವುದೇ ಸರಿ!